ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರವರಿ, 2021

ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆ ಕುರಿತು

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) -

61(466) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆಯು ನಿಗಧಿತ ಮಾನದಂಡಕ್ಕೆ ಅನುಗುಣವಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು;

(ಆ) ಬೆಂಗಳೂರಿನ ಕೆರೆಗಳ ಕಲುಷಿತಕ್ಕೆ ಸದರಿ ತ್ಯಾಜ್ಯ ನೀರು ಕಾರಣವಾಗಿರುವುದನ್ನು ಸರ್ಕಾರ ಯಾವ ರೀತಿ ಗುರುತಿಸುತ್ತಿದೆ;

(ಇ) ತ್ಯಾಜ್ಯ ನೀರಿನ ಸಂಸ್ಕರಣೆ ಬಗ್ಗೆ ಕೇಂದ್ರದ ಹಸಿರು ನ್ಯಾಯಾಧೀಕರಣಕ್ಕೆ ಪ್ರಕರಣ ಸಲ್ಲಿಸಿರುವ ಬಗ್ಗೆ ಸರ್ಕಾರದ ಕ್ರಮಗಳೇನು;

(ಈ) ಸದರಿ ಅವಘಡಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಸ್ತುವಾರಿ ಸಿವಿಲ್ ಇಂಜಿನೀಯರ್‌ಗಳನ್ನು ಹೊರತುಪಡಿಸಿ ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಮೆಕಾನಿಕಲ್ ಇಂಜಿನೀಯರ್ ಪದವೀಧರರನ್ನು ಮುಖ್ಯ ಇಂಜಿನೀಯರ್‌ಗಳನ್ನಾಗಿ ಹೊಂದಿರುವುದು ಕಾರಣವಲ್ಲವೇ;

(ಉ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಸಿವಿಲ್ ಇಂಜಿನೀಯರ್‌ಗಳನ್ನು ಮುಖ್ಯ ಇಂಜಿನೀಯರ್‌ಗಳನ್ನಾಗಿ ನೇಮಕ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ?